O.S. ನಂಬರಃ 23/2023
ಪಿ. ಡಬ್ಲ್ಯೂಃ 1

ದಿಃ 02-07-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಂ.ಪಿ.ಬಿ ರವರಿಂದಃ

ದಾವಾ ಜಮೀನು ಎಷ್ಟು ಗುಂಟೆ ಜಮೀನಾಗಿರುತ್ತದೆ ಎಂದರೆ ಸಾಕ್ಷಿಯು ನಾಲ್ಕೂವರೆ ಗುಂಟೆ ಜಮೀನಾಗಿರುತ್ತದೆ ಎಂದು ನುಡಿಯುತ್ತಾರೆ. ಅದರಲ್ಲಿ ಒಂದು ಮನೆಯೂ ಸಹ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಮನೆ ಹಾಗೂ ಜಮೀನನ್ನು ಮಾರಾಟ ಮಾಡಿದರ ಎಷ್ಟು ಮೌಲ್ಯಕ್ಕೆ ಹೋಗುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅದು ಶೇತಗಿ ಜಮೀನಾಗಿರುತ್ತದೆಯಾ ಅಥವಾ ಬಿನ್ ಶೇತಗಿ ಜಮೀನಾಗಿರುತ್ತದೆಯಾ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಮಾಡಬೇಕಾದರೆ ದಾವಾ ಜಮೀನು ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು 2 ನೇ ಪ್ರತಿವಾದಿಯ ಹೆಸರಿಗೆ ಇತ್ತು ಎಂದು ನುಡಿಯುತ್ತಾರೆ. ನಿಮ್ಮ ಮದುವೆಯಾಗಿ ಎಷ್ಟು ವರ್ಷಗಳಾಗಿರುತ್ತವೆ ಎಂದರೆ ಸಾಕ್ಷಿಯು 21 ವರ್ಷಗಳಾಗಿರುತ್ತವೆ ಎಂದು ನುಡಿಯುತ್ತಾರೆ. 21 ವರ್ಷದ ಅವಧಿಯಲ್ಲಿ ದಾವಾ ಜಮೀನಿಗೆ ಸಂಬಂಧಪಟ್ಟು ಭೂ ಕಂದಾಯ ಕಟ್ಟಿರುವ ಪಾವತಿಗಳು ನನ್ನ ಹತ್ತಿರ ಇರುತ್ತವೆ. ಮನೆಯ ತೆರಿಗೆ ಪಾವತಿ ಇರುತ್ತದೆಯಾ ಎಂದರೆ ಸಾಕ್ಷಿಯು ಇರುತ್ತವೆ ಎಂದು

ನುಡಿಯುತ್ತಾರೆ. ದಾವಾ ಜಮೀನಿನಲ್ಲಿರುವ ಮನೆಯನ್ನು ನನ್ನ ಗಂಡ ಕಟ್ಟಿದ್ದರ ಬಗ್ಗೆ ಏನಾದರೂ ದಾಖಲಾತಿಗಳು ಇವೆಯಾ ಎಂದರೆ ಸಾಕ್ಷಿಯು ಇರುತ್ತವೆ ಎಂದು ನುಡಿಯುತ್ತಾರೆ. ಮನೆಯನ್ನು ಕಟ್ಟುವ ಸಂದರ್ಭದಲ್ಲಿ ಅವರ್ಸಾ ಪಂಚಾಯತಿಯಿಂದ ಏನಾದರೂ ಪರವಾಣಿಗಯನ್ನು ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ನನ್ನ ಗಂಡನಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಯಜಮಾನರು ಎಲ್ಲಿ ಉದ್ಯೋಗ ಮಾಡುತ್ತಿದ್ದರು ಎಂದರೆ ಓರಿಯಂಟಲ್ ಕಂಪನಿಯಲ್ಲಿ ಹೊಸಪೇಟೆಯಲ್ಲಿ ಮಾಡುತ್ತಾರೆ. ಸಾಮಾನ್ಯವಾಗಿ ಎಷ್ಟು ವರ್ಷಗಳ ಕಾಲ ಕೆಲಸ ಮಾಡಿದ್ದರು ಎಂದರೆ ಸಾಕ್ಷಿಯು ನನ್ನ ಮದುವೆಯಾಗುವ ಪೂರ್ವದಿಂದಲೂ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಮದುವೆಯಾದ ನಂತರ ತೀರಿಕೊಳ್ಳುವತನಕ ಎಷ್ಟು ವರ್ಷಗಳ ಕಾಲ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅವರು ತೀರಿಕೊಳ್ಳುವತನಕ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಸುಮಾರು 20 ವರ್ಷಗಳ ಕಾಲ ಕೆಲಸ ಮಾಡಿದ್ದರು. 20 ವರ್ಷಗಳ ಕಾಲ ಮದುವೆಯಾದ ನಂತರ ಗಂಡನ ಜೊತೆಗೆ ವಾಸ ಮಾಡುತ್ತಿದ್ದೀರಾ ಅಥವಾ ಬೇರೆಯಾಗಿ ವಾಸ ಮಾಡುತ್ತೀದ್ದೀರಾ ಎಂದರೆ ಸಾಕ್ಷಿಯು ಗಂಡನ ಜೊತೆಗೆ ವಾಸ ಮಾಡುತ್ತಿದ್ದೇನು ಎಂದು ನುಡಿಯುತ್ತಾರೆ. ಸಾಕ್ಷಿ ಯು ನಾವು ಇಲ್ಲಿಯೇ ವಾಸ್ತವ್ಯ ಮಾಡುತ್ತಿದ್ದು, ನನ್ನ ಗಂಡನು ಬಂದು ಹೋಗಿ ಮಾಡುತ್ತಿದ್ದನು ಎಂದು ನುಡಿಯುತ್ತಾರೆ. ನೀವು ಗಂಡನು ಸಾಯುವ ಪೂರ್ವದಲ್ಲಿ ಎಂದಿಗೂ ಸಹ ದಾವಾ ಜಮೀನಿನಲ್ಲಿರುವ ಮನೆಯಲ್ಲಿ ವಾಸ್ತವ್ಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ ನೀವು

ಮತ್ತು ನಿಮ್ಮ ಗಂಡ ವಾಸ್ತವ್ಯ ಮಾಡುತ್ತಿದ್ದೀರಿ ಎಂದು ತೋರಿಸಲು ರೇಷನ್ ಕಾರ್ಡ ಇರುತ್ತದೆಯಾ ಎಂದರೆ ಇರುತ್ತದೆ ಎಂದು ನುಡಿಯುತ್ತಾರೆ. ರೇಷನ್ ಕಾರ್ಡ ಅಥವಾ ಆಧಾರ ಕಾರ್ಡಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

2. ನಿಮ್ಮ ಅತ್ತೆಯ ಹೆಸರು ಏನು ಎಂದರೆ ಸಾಕ್ಷಿಯು ಶಾಂತಿ ಸದಾನಂದ ನಾಯಕ ಎಂದು ನುಡಿಯುತ್ತಾರೆ. ಅವರು ಎಲ್ಲಿ ಇರುತ್ತಿದ್ದರು ಎಂದರೆ ಸಾಕ್ಷಿಯು ಅಗಸೂರಿನಲ್ಲಿ ಇರುತ್ತಿದ್ದರು ಎಂದು ನುಡಿಯುತ್ತಾರೆ. ನಿಮ್ಮ ಅತ್ತೆಯ ತಾಯಿ ಮನೆ ಎಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಬಾವಿಕೇರಿಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸಣ್ಣಮ್ಮ ಎಂದರೆ ನಿಮ್ಮ ಅತ್ತೆ ಎಂದರೆ ಸಾಕ್ಷಿಯು ಅತ್ತೆ ಆಗುವುದಿಲ್ಲ, 1 ನೇ ಪ್ರತಿವಾದಿಯ ತಾಯಿ ಎಂದು ನುಡಿಯುತ್ತಾರೆ. 1 ನೇ ವಾದಿಯ ತಾಯಿಗೆ ಚೋಳಾ, ಈರಾ, ದತ್ತಾ, ಗೋವಿಂದ ಎನ್ನುವ ಸಹೊದರರರು ಹಾಗೂ ಗಿರಿಜಾ ಎನ್ನುವ ಸಹೋದರಿ ಇದ್ದರು ಎಂದರೆ ಸರಿ. 1 ನೇ ಪ್ರತಿವಾದಿಯ ತಾಯಿ ಜೀವಂತ ಇರುತ್ತಾಳಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

3. ದಾವಾ ಜಮೀನು 1 ನೇ ಪ್ರತಿವಾದಿಯ ತಾಯಿಯ ಅಣ್ಣತಮ್ಮಂದಿರು ಪಾಲನ್ನು ಮಾಡಿಕೊಂಡಿರುವ ಸಮಯದಲ್ಲಿ 1 ನೇ ಪ್ರತಿವಾದಿಯ ತಾಯಿಗೆ ಕೊಟ್ಟಂತಹ ಜಮೀನು

ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯ ತಾಯಿ ಮತ್ತು ಅವರ ಸಹೋದರ-ಸಹೊದರಿಯರ ಮಧ್ಯ ದಿಃ06-08-1937 ರಲ್ಲಿ ನೊಂದಾಯಿತ ಹಿಸ್ಸೆ ಪಟ್ಟಿಯಾಗಿತ್ತು ಎಂದರೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯು ಸಣ್ಣಮ್ಮನ ಸ್ತ್ರೀ ಧನ ಆಸ್ತಿಯಾಗಿದ್ದು, ಆಕೆಗೆ ಅವಳ ತವರು ಮನೆಯಿಂದ ಬಂದಂತಹ ಆಸ್ತಿಯಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಪ್ರತಿವಾದಿಯರ ಹಾಗೂ ನಿಮ್ಮ ಗಂಡನ ಪಿತ್ರಾರ್ಜಿತ ಆಸ್ತಿಯಾಗಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

4. ನೀವು ಸಣ್ಣಮ್ಮ ಪೇಟು ನಾಯಕ ಇವರನ್ನು ನೋಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಣ್ಣಮ್ಮ ಪೇಟು ನಾಯಕ ಇವರು ದಾವಾ ಆಸ್ತಿಯನ್ನು ದಿಃ08-10-1997 ರಲ್ಲಿ 2 ನೇ ಪ್ರತಿವಾದಿಯ ಪರವಾಗಿ ನೊಂದಾಯಿತ ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಆದ ಕಾರಣ ದಾವಾ ಆಸ್ತಿಯಲ್ಲಿ ನಿಮ್ಮ ಗಂಡನಿಗಾಗಲಿ ಅಥವಾ 1 ನೇ ಪ್ರತಿವಾದಿಗಾಗಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿಯು ಈಗ ನಾವು ಎಲ್ಲಿ ಹೋಗಬೇಕು ಎಂದು ನುಡಿಯುತ್ತಾರೆ. ಆ ಕಾರಣ 2 ನೇ ಪ್ರತಿವಾದಿಯು ಮಾನವೀಯತೆಯ ದೃಷ್ಟಿಯಿಂದ ಸದರಿ ಮನೆಯಲ್ಲಿ ಉಳಿಯಲು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಈಗ ಈ ರೀತಿ ಹೇಳುತ್ತಿದ್ದಾರೆ ಎಂದು ನುಡಿಯುತ್ತಾರೆ. ಈ ರೀತಿ ಮಾನವೀಯತೆ ದೃಷ್ಟಿಯಿಂದ ವಾಸ ಮಾಡಲು ಕೊಟ್ಟಿದ್ದ ಕಾರಣ ಅದರ ಮೇಲೆಯೇ ಹಕ್ಕು ಸಾಧನೆ ಮಾಡಲು ಈ ಸುಳ್ಳು ದಾವೆಯನ್ನು ಪ್ರತಿವಾದಿಯರ ವಿರುದ್ಧ

ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಜಮೀನು 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು, ಆತನನ್ನು ದಾವಾ ಆಸ್ತಿಯಿಂದ ಹೊರಹಾಕಲು ಈ ರೀತಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

5. ನಿಮ್ಮ ಮದುವೆಯಾದ ನಂತರ ಯಾವ ಮನೆಗೆ ಮೊದಲು ಒಳಹೊಗಿಸಿದ್ದರು ಎಂದರೆ ಸಾಕ್ಷಿಯು ಅಗಸೂರಿನಲ್ಲಿ ಎಂದು ನುಡಿಯುತ್ತಾರೆ. ನಂತರ ಸಾಕ್ಷಿಯು ಸ್ವಲ್ಪ ಹೊತ್ತು ಆದ ನಂತರ ಅದನ್ನು ಬದಲಾವಣೆ ಮಾಡಿ ದಾವಾ ಜಮೀನಿನಲ್ಲಿರುವ ಮನೆಯಲ್ಲಿಯೇ ಎಂದು ನುಡಿಯುತ್ತಾರೆ. ನಿನ್ನ ಮದುವೆಯಾಗುವ ಸಂದರ್ಭದಲ್ಲಿ ನಿಮ್ಮ ಯಜಮಾನರ ಮನೆ ಎಲ್ಲಿ ಇತ್ತು ಎಂದರೆ ಸಾಕ್ಷಿಯು ಅವರ್ಸಾದಲ್ಲಿ ಇತ್ತು ಎಂದು ನುಡಿಯುತ್ತಾರೆ. ಲಗ್ನ ಪತ್ರಿಕೆಯಲ್ಲಿ ಅವರ ವಿಳಾಸವನ್ನು ಅವರ್ಸಾ ಎಂದೇ ಕೊಟ್ಟಿರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಲಗ್ನ ಪತ್ರಿಕೆ ನಿಮ್ಮ ಹತ್ತಿರ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ನಿನ್ನ ಗಂಡ ಮತ್ತು 2 ನೇ ಪ್ರತಿವಾದಿಯ ಜೊತೆಗೆ ಅಂಕೋಲಾ ತಾಲೂಕಿನ ಹೆಗ್ಗಾರಮಕ್ಕಿಗದ್ದೆ ಗ್ರಾಮದಲ್ಲಿ ವಾಸ್ತವ್ಯ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅಲ್ಲಿಗೆ ಹೋಗಿದ್ದೇವು, ಇಲ್ಲಿಯೂ ಸಹ ವಾಸ್ತವ್ಯ ಮಾಡಿದ್ದೇವು ಎಂದು ನುಡಿಯುತ್ತಾರೆ. ದಾವಾ ಜಮೀನಿನಲ್ಲಿ 1 ನೇ ಪ್ರತಿವಾದಿಯದ್ದಾಗಲಿ ಅಥವಾ ಅವರ ತಂದೆಯದ್ದಾಗಲಿ ಇರಲಿಲ್ಲ ಎಂದರೆ ಸರಿಯಲ್ಲ. 1997 ನೇ ಸಾಲಿನಲ್ಲಿ ಭಕ್ಷಿಸು ಪತ್ರವಾದ ನಂತರ ದಾವಾ ಆಸ್ತಿಯಲ್ಲಿ ಮನೆಯನ್ನು ಕಟ್ಟಿರುತ್ತಾನೆ ಎಂದರೆ ಸರಿಯಲ್ಲ. ನಿನ್ನ

ಮದುವೆಯ ಲಗ್ನ ಪತ್ರಿಕೆಯಲ್ಲಿ ವಿಳಾಸವನ್ನು ಹೆಗ್ಗಾರಮಕ್ಕಿಗದ್ದೆ ಗ್ರಾಮ ಎಂದು ಬರೆದುಕೊಂಡಿರುತ್ತದೆ ಎಂದರೆ ಸಾಕ್ಷಿಯು ಅವರ್ಸಾದ ವಿಳಾಸ ಇರುತ್ತದೆ ಎಂದು ನುಡಿಯುತ್ತಾರೆ. ಸಣ್ಣಮ್ಮ ಪೇಟು ನಾಯಕ ಇವರಿಗೆ ಗಿರಿಜಾ ಕೋಂ ಹನುಮಂತ ನಾಯಕ ಎಂಬ ಹೆಸರಿನ ಸಹೋದರಿ ಇದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಹೆಗ್ಗಾರಮಕ್ಕಿಗದ್ದೆಯಲ್ಲಿದ್ದ ನಿಮ್ಮ ಮಾವನ ಆಸ್ತಿಯು ಗಿರಿಜಾ ಕೋಂ ಹನುಮಂತ ನಾಯಕ ಇವರ ಹೆಸರಿಗೆ ಇತ್ತು ಎಂದರೆ ಗೊತ್ತಿರುವುದಿಲ್ಲ.

6. ಹೆಗ್ಗಾರಮಕ್ಕಿಗದ್ದೆಯಲ್ಲಿದ್ದ ಆಸ್ತಿಯನ್ನು 1 ನೇ ಪ್ರತಿವಾದಿಯು ಗಿರಿಜಾ ಕೊಂ ಹನುಮಂತ ನಾಯಕ ಇವರಿಂದ ನೋಂದಾಯಿತ ಪತ್ರದ ಅಡಿಯಲ್ಲಿ ಪಡೆದುಕೊಂಡಿದ್ದನು ಎಂದರೆ ಗೊತ್ತಿರುವುದಿಲ್ಲ. ನಿಮ್ಮ ಗಂಡ ಜೀವಂತ ಇದ್ದಾಗಲಾಗಲಿ ಅಥವಾ ತೀರಿಕೊಂಡ ನಂತರವಾಗಲಿ ಆಸ್ತಿಯನ್ನು ಪಾಲು ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಪಾಲನ್ನು ಮಾಡಿಕೊಡುವುದಿಲ್ಲ, ಆದರೆ ದಾವಾ ಆಸ್ತಿಯನ್ನು ನಿನ್ನ ಗಂಡನಿಗೆ ಕೊಡುತ್ತೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಈ ರೀತಿ ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿಯು 2 ನೇ ಪ್ರತಿವಾದಿ ನನ್ನ ಗಂಡನಿಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಹೇಳಿರುವುದನ್ನು ಲಿಖಿತವಾಗಿ ಅಥವಾ ನೊಂದಾಯಿತ ದಸ್ತಾವೇಜಿನಲ್ಲಾಗಲಿ ಮಾಡಿಕೊಂಡಿದ್ದು ಇರುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

7. ಹೆಗ್ಗಾರಮಕ್ಕಿ ಗದ್ದೆ ಗ್ರಾಮದಲ್ಲಿರುವ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು, ಅವರ್ಸಾದಲ್ಲಿರುವ ಆಸ್ತಿಯು 2 ನೇ ಪ್ರತಿವಾದಿಯ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿಯು ಈಗ ನಾವು ಎಲ್ಲಿ ಹೋಗಬೇಕು ಎಂದು ಕೇಳುತ್ತಾರೆ. ಈ ರೀತಿಯಾಗಿ ನೀವು ಎಂದಿಗಾದರೂ ನಿಮ್ಮ ಮಾವನ ಹತ್ತಿರ ಕೇಳಿರುತ್ತೀರಾ ಎಂದರೆ ಸಾಕ್ಷಿಯು ಕೇಳಿದ್ದು, ಆದರೆ ಅವರು ಮನೆ ಬಿಟ್ಟು ಹೋಗು ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು 2 ನೇ ಪ್ರತಿವಾದಿಯ ಆಸ್ತಿಯಾಗಿದ್ದು, ಅದರಲ್ಲಿರುವ ಮನೆಯನ್ನು 2 ನೇ ಪ್ರತಿವಾದಿಯೇ ಕಟ್ಟಿಕೊಂಡಿರುತ್ತಾನೆ ಎಂದರೆ ಸಾಕ್ಷಿಯು ಮನೆಯನ್ನು ನಾವು ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಕಂಪೌಂಡ್ ವಗೈರೆ ಇದ್ದು, ಕಟ್ಟಿದ್ದಕ್ಕೆ ಸಾಕ್ಷಿದಾರರು ಇರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿದಾರರ ಹೆಸರನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಯು ಯಾವ ಕೆಲಸ ಮಾಡುತ್ತಾನೆ ಎಂದರೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ಏನು ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿಯು ಅಗಸೂರಿನಲ್ಲಿ ತೋಟದ ಕೆಲಸ ಮಾಡುತ್ತಾರೆ ಎಂದು ನುಡಿಯುತ್ತಾರೆ. ನೀವೇನಾದರೂ ನಿಮ್ಮ ಮಾವನ ಜೊತೆಗೆ ಹೋಗಿ ತೋಟದಲ್ಲಿ ಕೆಲಸ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಮೊದಲು ಹೋಗುತ್ತಿದ್ದು, ಗಂಡ ತೀಕೊಂಡ ನಂತರ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮಾವ ಏನಾದರೂ ನಿಮಗೆ ಕ್ರೂರತ್ವ ಮಾಡಿದ್ದು ಇದೆಯಾ ಎಂದರೆ ಸಾಕ್ಷಿಯು ಮನೆಯಲ್ಲಿ ಉಳಿದುಕೊಳ್ಳುವುದು ಬೇಡ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಜಮೀನು ಮತ್ತು ಅದರಲ್ಲಿರುವ

ಮನೆಯು 2 ನೆ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು, ಅದರಲ್ಲಿ ನನಗಾಗಲಿ ಅಥವಾ ನನ್ನ ಮಕ್ಕಳಿಗಾಗಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಿಮಗಾಗಲಿ ಅಥವಾ ನಿಮ್ಮ ಮಕ್ಕಳಿಗಾಗಲಿ ದಾವಾ ಆಸ್ತಿಯಲ್ಲಿ ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯನ್ನು ನೀವು ನುಂಗಿಹಾಕಬೇಕು ಎನ್ನುವ ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಮ್ಮನ್ನು ದಾವಾ ಮನೆಯಿಂದ ಹೊರಗೆ ಹಾಕುತ್ತೇವೆ ಎಂದು ನೋಟಿಸನ್ನು ಏನಾದರೂ ಕೊಟ್ಟಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯು ಏನಾದರೂ ಬಲತ್ಕಾರದಿಂದ ನಿಮ್ಮನ್ನು ಮನೆಯಿಂದ ಹೊರಗೆ ಹಾಕಲು ಪ್ರಯತ್ನ ಮಾಡಿರುತ್ತಾರಾ ಎಂದರೆ ಸಾಕ್ಷಿಯು ಹೌದು ತೊಂದರೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ದಿನಾಂಕ, ತಿಂಗಳು ಹಾಗೂ ಸಾಲಿನಲ್ಲಿ ಆ ರೀತಿ ಮಾಡಿರುತ್ತಾರೆ ಎಂದರೆ ನನಗೆ ಹೇಳಲು ಬರುವುದಿಲ್ಲ. ನಾನು ಹೀಗೆ ಅಂದಾಜಿಗೆ ಅವರು ತೊಂದರೆ ಮಾಡಿದ್ದಾರೆ ಎಂದು ದಾವೆಯಲ್ಲಿ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಇಂದಿನ ಕಾಲಕ್ಕೆ ರೂ.10 ಲಕ್ಷಕ್ಕೆ ಮೇಲ್ಪಟ್ಟು ಮೌಲ್ಯ ಇರುತ್ತದೆ ಎಂದರೆ ಗೊತ್ತಿರುವುದಿಲ್ಲ. ಅದನ್ನು ಕಡಿಮೆ ಮೌಲ್ಯಕ್ಕೆ ತೋರಿಸಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

8. ನೀವೇನಾದರೂ ಅಥವಾ ನಿಮ್ಮ ಗಂಡ ಏನಾದರೂ ದಾವಾ ಜಮೀನು ಹಾಗೂ ಮನೆಗೆ ನಿಮ್ಮ ಹೆಸರನ್ನು ದಾಖಲಿಸಲು ಅರ್ಜಿಯನ್ನು ಕೊಟ್ಟಿರುತ್ತೀರಾ ಎಂದರೆ ಇಲ್ಲ ಎಂದು

ನುಡಿಯುತ್ತಾರೆ. ಹೀಗೆ ನೀವು 2 ನೇ ಪ್ರತಿವಾದಿಯ ಹತ್ತಿರ ಅತ್ತುಕೊಂಡು ಸ್ವಲ್ಪ ದಿನಗಳ ಕಾಲ ದಾವಾ ಮನೆಯಲ್ಲಿ ಉಳಿದುಕೊಳ್ಳಲು ಕೇಳಿಕೊಂಡಿದ್ದು, ನಂತರ ಬಿಟ್ಟುಹೋಗುತ್ತೇವೆ ಎಂದು ಹೇಳಿದ್ದ ಕಾರಣ ಅವರು ಉಳಿಯಲು ನಮಗೆ ಕೊಟ್ಟಿರುತ್ತಾರೆ ಎಂದರೆ ನಾನು ಆ ರೀತಿ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಗೆ ಕೊಟ್ಟ ಆಸ್ತಿಯಾಗಿದ್ದರಿಂದ ಈಗ ಅವರಿಗೆ ಮೋಸಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯಾದ ಮೇಲೆ ನೀವು ನಿಮ್ಮ ಗಂಡನ ಜೊತೆಗೆ ಹೊಸಪೇಟೆಯಲ್ಲಿ ವಾಸ್ತವ್ಯ ಮಾಡಿಕೊಂಡು ಇದ್ದೀರಿ ಎಂದರೆ ಸರಿಯಲ್ಲ. ನಾನಾಗಲಿ ಅಥವಾ ನನ್ನ ಗಂಡನಾಗಲಿ ರೈತಾಬಿ ಕೆಲಸವನ್ನು ಮಾಡಿದ್ದೇ ಇರುವುದಿಲ್ಲ. ಹೊಸಪೇಟೆಯಲ್ಲಿ ಹೋಗಿ ಕೆಲಸ ಮಾಡಿರುತ್ತಾರೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.